‘ಕೋವಿಡ್ 19’ರ ಕಾರಣದಿಂದಾಗಿ ಚಿಣ್ಣರಿಗೆ ಹೆಚ್ಚುವರಿ ರಜೆ ದೊರಕಿದೆ. ರಜೆ ಎಂದರೇನು, ಮನರಂಜನೆ ಮನೋವಿಕಾಸದ ದಿನಗಳಷ್ಟೇ. ಈ ರಂಜನೆವಿಕಾಸ ದೊರಕಿಸಿಕೊಡುವಲ್ಲಿ ಕಥೆಗಳ ಪಾತ್ರ ದೊಡ್ಡದು. ಎಳೆಯರ ಮನಸ್ಸನ್ನು ರಮ್ಯ ಕುದುರೆಯನ್ನೇರಿಸಿ ವಿಶ್ವವನ್ನೆಲ್ಲ ಸುತ್ತಿಸಿಬರುವ ಒಳ್ಳೆಯ ಕಥೆಗಳು, ಕಲ್ಪನಾಶಕ್ತಿಯನ್ನು ಹೆಚ್ಚಿಸುವುದರೊಂದಿಗೆ ಆರೋಗ್ಯಕರ ಮನಸ್ಥಿತಿಯನ್ನೂ ರೂಪಿಸಬಲ್ಲವು. ಅಂಥ ಸಮ್ಮೋಹಕ ಕಥೆಯೊಂದು ಇಲ್ಲಿದೆ. ದೊಡ್ಡವರಿಗೂ ಇಷ್ಟವಾಗಬಲ್ಲ ಈ ಕಥೆಯನ್ನು ಮಕ್ಕಳಿಂದ ಓದಿಸಿ, ಇಲ್ಲವೇ ನೀವೇ ಓದಿ ಹೇಳಿ. ಪುಣ್ಯಕೋಟಿ ಕಥೆಯ ಈ ಹೊಸ ಆವೃತ್ತಿ ಎಳೆಯ ತಲೆಮಾರಿನ ಓದುಗ ಬಳಗಕ್ಕೆ ‘ಸುಧಾ’ದ ಪ್ರೀತಿಯ ಉಡುಗೊರೆ.



ದೊಡ್ಡ ಕಾಡೊಂದರಲ್ಲಿ ಒಂದು ದೊಡ್ಡ ಪಟ್ಟೆ ಹುಲಿ ಮತ್ತು ಒಂದು ಪುಟ್ಟ ಇಲಿ ವಾಸವಾಗಿದ್ದವು. ಹುಲಿಯ ಹೆಸರು ಪಟ್ಟಪ್ಪ, ಇಲಿಯ ಹೆಸರು ಮಿಟ್ಟು. ಪಟ್ಟಪ್ಪ ಮತ್ತು ಮಿಟ್ಟಿಲಿ ಇಬ್ಬರೂ ತುಂಬಾ ಒಳ್ಳೆಯ ಗೆಳೆಯರಾಗಿದ್ದರು ಮತ್ತು ಯಾವಾಗಲೂ ಒಟ್ಟಿಗೇ ಇರುತ್ತಿದ್ದರು. ಹೀಗಿರುವಾಗ ಒಂದು ಸಲ ಆ ಕಾಡಿನಲ್ಲಿ ಭೀಕರ ಬರಗಾಲ ಬಂದಿತು. ಮಳೆಯಿಲ್ಲದೆ ಗಿಡಮರಗಳೆಲ್ಲಾ ಒಣಗಿಹೋದವು. ಹೊಳೆ ಹಳ್ಳಗಳೆಲ್ಲಾ ಬತ್ತಿ ಕುಡಿಯಲೂ ನೀರಿಲ್ಲದಂತಾಯಿತು. ಆಹಾರ ಸಿಕ್ಕದೇ ಪ್ರಾಣಿಗಳೆಲ್ಲಾ ಸಾಯತೊಡಗಿದವು. ಅಳಿದುಳಿದ ಪ್ರಾಣಿಗಳು ನೀರು ಆಹಾರ ಹುಡುಕಿಕೊಂಡು ಅಲ್ಲಿಂದ ವಲಸೆ ಹೋಗಲಾರಂಭಿಸಿದವು.

ಬರಗಾಲದಿಂದ ಕಂಗೆಟ್ಟ ಪಟ್ಟಪ್ಪ ಮತ್ತು ಮಿಟ್ಟಿಲಿ ಕೂಡ ಆ ಕಾಡನ್ನು ತೊರೆದು ದೂರದ ಮತ್ತೊಂದು ಕಾಡಿಗೆ ಹೋಗಲು ನಿರ್ಧರಿಸಿ ಇಬ್ಬರೂ ಒಟ್ಟಾಗಿ ಅಲ್ಲಿಂದ ಹೊರಟರು. ಬಹಳ ದೂರ ಹೀಗೇ ನಡೆದೂ ನಡೆದೂ ಇಬ್ಬರಿಗೂ ತುಂಬಾ ಆಯಾಸವಾಯಿತು. ಸೇರಬೇಕಾದ ಕಾಡು ಇನ್ನೂ ಬಹಳ ದೂರವಿತ್ತು. ಮೊದಲೇ ಹಸಿವಿನಿಂದ ಬಳಲಿ ನಿಶ್ಯಕ್ತವಾಗಿದ್ದ ಪಟ್ಟಪ್ಪ ಈಗ ಹಸಿವು ಬಾಯಾರಿಕೆ ತಾಳಲಾರದೆ ದಾರಿಯಲ್ಲಿಯೇ ಕುಸಿದು ಕುಳಿತುಬಿಟ್ಟಿತು. ‘ಅಯ್ಯೋ... ದಾಹ... ದಾಹ... ಮಿತ್ರಾ ಇನ್ನು ನನ್ನಿಂದಾಗದು. ಇನ್ನೊಂದು ಹೆಜ್ಜೆ ಕೂಡಾ ಇಡಲಾರೆ. ಎಲ್ಲಾದರೂ ಒಂದು ಹನಿ ನೀರು ದೊರೆತರೆ ನನ್ನ ಪ್ರಾಣ ಉಳಿದೀತು’ ಎಂದು ಏದುಸಿರುಬಿಟ್ಟಿತು ಹುಲಿ ಪಟ್ಟಪ್ಪ. ಗೆಳೆಯನ ಸ್ಥಿತಿ ಕಂಡು ಮಿಟ್ಟಿಲಿ ಆತುರದಿಂದ ಅಲ್ಲಿಯೇ ಸುತ್ತ ಮುತ್ತ ನೀರಿಗಾಗಿ ಹುಡುಕಿತು. ಹನಿ ನೀರೂ ಸಿಕ್ಕಲಿಲ್ಲ. ದಾಹದಿಂದ ಗಂಟಲೊಣಗಿ ಹೋಗಿದ್ದ ಪಟ್ಟಪ್ಪ ಮಿಟ್ಟಿಲಿಯನ್ನು ಕರೆದು ಕಷ್ಟದಿಂದ ಹೇಳಿತು, ‘ಗೆಳೆಯಾ ಇನ್ನು ನನಗಾಗಿ ಕಷ್ಟಪಡಬೇಡ, ನನ್ನನ್ನು ಇಲ್ಲಿಯೇ ಬಿಟ್ಟು ನೀನು ಹೊರಡು. ನೀನಾದರೂ ಸುರಕ್ಷಿತ ಜಾಗ ಸೇರಿಕೊಂಡು ಬದುಕಿಕೋ. ನನ್ನ ಕಾಲ ಮುಗಿಯಿತು. ಹೋಗು ಗೆಳೆಯಾ, ತಡಮಾಡಬೇಡ’ ಎಂದ ಪಟ್ಟಪ್ಪನ ಮಾತನ್ನು ಕೇಳಿ ಇಲಿ ಕಣ್ಣೀರಿಟ್ಟಿತು.

‘ಇಲ್ಲ ಗೆಳೆಯಾ, ನಿನ್ನನ್ನು ಈ ಸ್ಥಿತಿಯಲ್ಲಿ ಬಿಟ್ಟು ಹೋಗಲು ನನ್ನಿಂದಾಗದು. ಸ್ವಲ್ಪ ಹೊತ್ತು ಸಹಿಸಿಕೋ. ಎಲ್ಲಿಂದಾದರೂ ನೀರು ಹುಡುಕಿಕೊಂಡು ಬಂದು ನಿನ್ನನ್ನು ಬದುಕಿಸಿಕೊಂಡೇನು’ ಎನ್ನುತ್ತಾ ಹುಲಿಯನ್ನು ಸಂತೈಸಿದ ಇಲಿ ನೀರು ಹುಡುಕಿಕೊಂಡು ಅಲ್ಲಿಂದ ಹೊರಟಿತು.

ಆ ಕಾಡಿನಲ್ಲಿ ಬರಗಾಲ ಬಂದ ಸುದ್ದಿ ತಿಳಿದು ಬೇಟೆಗಾರನೊಬ್ಬ, ಹಸಿವಿನಿಂದ ನಿಶ್ಯಕ್ತವಾಗಿರುವ ಪ್ರಾಣಿಗಳನ್ನು ಸುಲಭವಾಗಿ ಬೇಟೆಯಾಡಬಹುದೆಂದು ತಿಳಿದು ಆ ಕಾಡಿನತ್ತಲೇ ಹೊರಟಿದ್ದ. ಅವನ ಜೊತೆಯಲ್ಲಿ ಸದಾ ಅವನ ಬಳಿ ಇರುತ್ತಿದ್ದ ಆತನ ನಾಯಿ ಮೋಜೋ ಮತ್ತು ಬೆಕ್ಕು ಮೋನು ಕೂಡಾ ಹೊರಟಿದ್ದವು. ದಾರಿಯಲ್ಲಿ